ದಿನಾಂಕಃ **29.07.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಕೆ ವಿ ವಕೀಲರಿಂದಃ-

ನನಗೆ ಓದಲು ಬರೆಯಲು ಬರುತ್ತದೆ. ನಾನು ರೈಲ್ವೆ ಸಾರಿಗೆಯಲ್ಲಿ ಕೆಲಸ ಮಾಡುತ್ತೇನೆ. ನನಗೆ ಮಾಸಿಕ ರೂ. 30,000 ಆದಾಯ ಇರುತ್ತದೆ. ನನಗೆ ಉದ್ಯೋಗ ಹೊರತುಪಡಿಸಿ ಬೇರೆ ಆದಾಯ ಇಲ್ಲಾ ಎಂದರೆ ಸಾಕ್ಷಿ ನನಗೆ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿ ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿ ನಾವು ಒಂದೇ ಊರಿನವರು ಎಂದು ನುಡಿಯುತ್ತಾರೆ. ನನ್ನ ಅಣ್ಣನ ಹೆಸರು ಮಂಜಾನಾಯ್ಕ. ನನ್ನ ಅಣ್ಣ ಮಂಜಾನಾಯ್ಕ ರವರು ಆರೋಪಿ ವಿರುದ್ದ ಚೆಕ್ ಅಮಾನ್ಯ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಮತ್ತು ನನ್ನ ಅಣ್ಣ ಒಂದೇ ದಿನ ನ್ಯಾಯಾಲಯಕ್ಕೆ ಬಂದು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸಾಕ್ಷಿ ನಾನು ಹುಬ್ಬಳ್ಳಿಯಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನನ್ನ ನಡುವೆ ಈ ಹಿಂದೆಯೂ ಹಣಕಾಸಿನ ವ್ಯವಹಾರ ನಡೆಯುತ್ತಿದ್ದವು. ಆ ಸಮಯದಲ್ಲಿ ಯಾವುದೇ ಚೆಕ್ಕನ್ನು ಪಡೆದುಕೊಂಡಿರಲಿಲ್ಲ.

ಆರೋಪಿ ಆರ್ಥಿಕವಾಗಿ ಸ್ಥಿತಿವಂತರಾಗಿರುತ್ತಾರೆ ಎಂದರೆ ಸರಿ. ಆರೋಪಿ ಆರ್ಥಿಕವಾಗಿ ಸ್ಥಿತಿವಂತರಾಗಿರುವ ಕಾರಣ ನನ್ನ ಬಳಿ ಸಾಲ ಪಡೆಯುವ ಅವಶ್ಯಕತೆ ಆತನಿಗೆ ಇರಲಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಆರೋಪಿಯ ತಂಗಿ ಮದುವೆ ಇತ್ತು ಮತ್ತು ಕಾರನ್ನು ಖರೀದಿಸುವ ಸಲುವಾಗಿ ನನ್ನ ಬಳಿ ಸಾಲ ಪಡೆದಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ಕಾರನ್ನು ಖರೀದಿ ಮಾಡಿರುತ್ತಾರೆ. ಆರೋಪಿಯು ಯಾವುದೇ ಕಾರನ್ನು ಈದಿನದವರೆಗೂ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಾರನ್ನು ಖರೀದಿ ಮಾಡಿದ ಬಗ್ಗೆ ದಾಖಲೆ ನನ್ನ ಬಳಿ ಇಲ್ಲ. ಆರೋಪಿಯು ನನ್ನನ್ನು ಕರೆ ಮಾಡಿ ಆತನ ತೋಟಕ್ಕೆ ನನ್ನನ್ನು ಕರೆದು ಸಾಲ ಕೇಳಿರುತ್ತಾರೆ. ದಿಃ 15.12.2022 ರಂದು ಕರೆದಿರಬಹುದು. ಆ ಸಮಯದಲ್ಲಿ ನೀವು ಏನು ಹೇಳಿರುತ್ತೀರಿ ಎಂದರೆ ಸಾಕ್ಷಿ ನೋಡುವಾ 8 ದಿನ ಸಮಯ ಬೇಕು ಎಂದು ಹೇಳಿರುತ್ತೇನೆ. ಸಾಮಾನ್ಯವಾಗಿ ರೂ. 50,000 ಕ್ಕಿಂತ ಹೆಚ್ಚಿನ ಹಣವನ್ನು ಬ್ಯಾಂಕ್ ಮೂಲಕವೇ ವರ್ಗಾಯಿಸಬೇಕು ಎಂಬ ಮಾಹಿತಿ ನನಗೆ ತಿಳಿದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ. ನಾನು ಉದ್ಯೋಗ ಮಾಡುತ್ತಿರುವ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಆರೋಪಿಗೆ ಹಣವನ್ನು ಆತನ ಮನೆಯಲ್ಲಿ ನೀಡಿರುತ್ತೇನೆ. ದಿಃ 25.12.2022 ರಂದು ಹಣವನ್ನು ನೀಡಿರುತ್ತೇನೆ.

ನನ್ನ ಆದಾಯವು ನನ್ನ ಕುಟುಂಬ ನಿರ್ವಹಣೆಗೆ ಮಾತ್ರ ಸಾಕಾಗುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಾಲ ನೀಡಿರುವ ಬಗ್ಗೆ ನನ್ನ ಸಹೋದರನಿಗೂ ಮಾಹಿತಿ ನೀಡಿರುತ್ತೇನೆ. ನಿಮ್ಮ ಸಹೋದರ

ಏನು ಹೇಳಿರುತ್ತಾರೆ ಎಂದರೆ ಸಾಕ್ಷಿ ನಿಮ್ಮ ನಿಮ್ಮ ವ್ಯವಹಾರ ನೀವೇ ನೋಡಿಕೊಳ್ಳಿ ಎಂದು ಹೇಳಿರುತ್ತಾರೆ. ನಾನು ಆರೋಪಿಗೆ ನಗದಾಗಿ ಸಾಲವನ್ನು ನೀಡಿರುತ್ತೇನೆ. ಬ್ಯಾಂಕ್ ಹಿಂಬರಹ ಏನೇಂದು ನೀಡಿರುತ್ತಾರೆ ಎಂದರೆ ಸಾಕ್ಷಿ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ ಎಂದು ಹಿಂಬರಹ ನೀಡಿರುತ್ತಾರೆ. ದಿಃ 18.08.2023 ರಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ನಿಪಿ-2 ರಲ್ಲಿ ದಿಃ 19.08.2023 ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಿಃ 18.08.2023 ರಂದು ನಿಮಗೆ ಹಿಂಬರಹ ನೀಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ದಿಃ 18.08.2023 ರಂದು ಚೆಕ್ ಅಮಾನ್ಯಗೊಂಡಿರುತ್ತದೆ. ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಲು ವಕೀಲರಿಗೆ ನಾನೇ ಖುದ್ದಾಗಿ ಮಾಹಿತಿ ನೀಡಿರುತ್ತೇನೆ. ನನ್ನ ದೂರಿನಲ್ಲಿ ದಿಃ 18.08.2023 ರಂದು ಹಿಂಬರಹ ನೀಡಿರುತ್ತಾರೆ ಎಂದು ನಾನು ಹೇಳಿರುತ್ತೇನೆ. ಆರೋಪಿ ಮತ್ತು ನಾನು ಒಂದೇ ಊರಿನವರಾದ ಕಾರಣ ನಾನು ಅವರ ಮನೆಗೆ ಅವರು ನಮ್ಮ ಮನೆಗೆ ಹೋಗುವುದು ಬರುವುದು ಮಾಡುತ್ತೇವೆ ಎಂದರೆ ಸರಿಯಲ್ಲ. ಮೊದಲನೇ ಬಾರಿ ಚೆಕ್ ಅಮಾನ್ಯಗೊಂಡ ನಂತರ ನಾನು ಆರೋಪಿಯ ಬಳಿ ಹಣವನ್ನು ಹಿಂದಿರುಗಿಸುವಂತೆ ಕೇಳಿದ್ದು, ಅವರು ನೀಡುತ್ತೇನೆ ಎಂದು ಹೇಳಿ ನೀಡದೆ ಇರುವ ಕಾರಣ 2 ನೇ ಬಾರಿ ಹಾಜರುಪಡಿಸಿ ಚೆಕ್ ಅಮಾನ್ಯಗೊಂಡ ನಂತರ ನೋಟಿಸು ಜಾರಿ ಮಾಡಿರುತ್ತೇನೆ.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.